**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.613/2023**

ಪಿ.ಡಬ್ಲ್ಯೂ.1

ದಿನಾಂಕ: 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಆರೋಪಿಯ ಪರ ವಕೀಲರಿಂದಃ**

ನನಗೆ ಆದಾಯ ವ್ಯವಸಾಯದಿಂದ ಬರುತ್ತದೆ ಎಂದರೆ ಹೌದು. ನನಗೆ ಚಿಮ್ಮಡದಲ್ಲಿ 3 ಎಕರೆ 5 ಗುಂಟೆ ಜಮೀನು ಇರುತ್ತದೆ. ನನಗೆ 3 ಎಕರೆ 5 ಗುಂಟೆ ಜಮೀನು ಇದೆ ಎಂದು ತೋರಿಸಲು ದಾಖಲಾತಿ ಹಾಜರು ಮಾಡಿರುತ್ತೇನೆ. ನನಗೆ ಸದರಿ ಕ್ಷೇತ್ರದಿಂದ ಪ್ರತಿವರ್ಷ 12 ರಿಂದ 15 ಲಕ್ಷ ಉತ್ಪನ್ನ ಬರುತ್ತದೆ. ಸದರಿ ಜಮೀನಿಂದ 12 ರಿಂದ 15 ಲಕ್ಷ ಉತ್ಪನ್ನ ಜಮಾ ಆಗುತ್ತದೆ ಎಂದು ತೋರಿಸಲು ದಾಖಲಾತಿ ಇರುತ್ತದೆ. ಸದರಿ ಕಬ್ಬಿನ ಬಿಲ್ಲಿನ ಪಾವತಿಯನ್ನು ಹಾಜರು ಮಾಡಿರುವುದಿಲ್ಲ. ಸದರಿ 12 ರಿಂದ 15 ಲಕ್ಷ ರೂಪಾಯಿ ಒಮ್ಮೇಲೆ ಜಮಾ ಆಗುವುದಿಲ್ಲ. ಸದರಿ 3 ಎಕರೆ 5 ಗುಂಟೆ ಕ್ಷೇತ್ರದಲ್ಲಿ 320 ಟನ್ ಕಬ್ಬು ಬೆಳೆಯುತ್ತೇನೆ ಹಾಗಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಭಾಗದಲ್ಲಿ ಎಕರೆಗೆ 3 ಟನ್ ಮೇಲ್ಪಟ್ಟು ಬೆಳೆಯುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಕಬ್ಬನ್ನು ಕಾರ್ಖಾನೆ ಕಳುಹಿಸಿದರ ಕುರಿತು ರಸೀದಿಯನ್ನು ಹಾಜರು ಮಾಡಿರುತ್ತೇನೆ. ನನಗೆ 3 ಎಕರೆ 5 ಗುಂಟೆ ಕ್ಷೇತ್ರ ಜಮೀನು ಇದೆ ಎಂದುತೋರಿಸಲು ಕಾಗದ ಇರುವುದಿಲ್ಲ, ಅದರಂತೆ ಸದರಿ 350 ಟನ್ ಕಬ್ಬನ್ನು ಕಾರ್ಖಾನೆ ಕಳುಹಿಸುವ ಕುರಿತು ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಿಮ್ಮಡದಲ್ಲಿ ಪ್ರತಿ ಎಕರೆಗೆ 40 ರಿಂದ 50 ಟನ್ ಕಬ್ಬು ಬರುತ್ತದೆ ಎಂದರೆ ಸಾಕ್ಷಿಯು 70 ಟನ್ ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ 3 ಎಕರೆಗೆ 240 ಟನ್ ಕಬ್ಬು ಬೆಳೆಯಲಾಗುತ್ತಿದ್ದರು , 350 ಟನ್ ಬೆಳೆಯಲಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೋವಿಡ್ ಬಂದ ಸಮಯದಲ್ಲಿ ಎಲ್ಲರಿಗೂ ಹಣದ ಅಡಚಣೆ ಇದ್ದು , ಆಗ ನಾನು ಆರೋಪಿಗೆ ರೂ. 9 ಲಕ್ಷ ಹಣ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಮಗಳ ಹೆಸರಿಗೆ ಇದ್ದ ಹಣವನ್ನು ಮಾರಾಟ ಮಾಡಿದ ಹಣದಿಂದ ನಾನು ಆರೋಪಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿದ ಹೊಲ ಎರಡುವರೆ ಎಕರೆ ಇದ್ದು , 12 ಲಕ್ಷ ಮೊತ್ತಕ್ಕೆ ಮಾರಾಟ ಮಾಡಿರುತ್ತೇನೆ.

2. ಸಿಸಿ ನಂ. 613/2023 ರಲ್ಲಿರುವ ನಿಪಿ-7 ಅನ್ನು ಸಾಕ್ಷಿಗೆ ತೋರಿಸಿ ಸದರಿ ನಿಪಿ-7 ರ ಪ್ರಕಾರ ಬಸವರಾಜ ಹುಕ್ಕೇರಿ ರವರಿಗೆ ಪ್ರಕಾಶ ಮುಗಳಖೋಡ ರವರು ಮಾರಾಟ ಮಾಡಿದ್ದು , ರೂ. 4,99,000/- ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಹೌದು. ನನ್ನ ಪಿರ್ಯಾದಿಯಲ್ಲಿ ನನ್ನ ಮಗಳ ಹೆಸರಿಗೆ ಇದ್ದ ಜಮೀನನ್ನು ರೂ. 4,99,000/- ಮಾರಾಟ ಮಾಡಿದ್ದು ಸದರಿ ಹಣದಿಂದ ಆರೋಪಿಗೆ ನೀಡಿರುತ್ತೇನೆ ಎಂದು ಬರೆಯಿಸಿರುತ್ತೇನೆ . ಹಾಗಂತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಕೊಟ್ಟ ಹಣ ನನ್ನ ಮಗನ ಹೆಸರಿಗೆ ಜಮಾ ಆಗಿರುತ್ತದೆ. ಸದರಿ ಖರೀದಿ ಮಾಡಿದ ಹಣವನ್ನು ಹಂತ ಹಂತವಾಗಿ ಕೊಟ್ಟಿರುತ್ತಾರೆ. ಸದರಿ ಹಣ ನಗದುರೂಪವಾಗಿ ಕೊಟ್ಟಿರುತ್ತಾರೆ. ಸದರಿ ಖರೀದಿ ಕೊಟ್ಟ ಹಣ ನನ್ನ ಮಗ ಹೆಸರಿಗೆ ಜಮಾ

ಆಗಿದ್ದು , ಸದರಿ ಹಣ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಬ್ಬು ಬೆಳೆಯುವುದರಿಂದ ಅರ್ಧ ಖರ್ಚು ಅದಕ್ಕೆ ವೆಚ್ಚವಾಗುತ್ತದೆ ಎಂದರೆ ಹೌದು. ನಮ್ಮಹೊಲದ ಮೇಲೆ ಬ್ಯಾಂಕಿನಲ್ಲಿ ಸಾಲ ತೆಗೆಯಲಾಗಿದೆ. ನನ್ನ 3 ಎಕರೆ 5 ಗುಂಟೆ ಜಮೀನಿನ ಮೇಲೆ ಕೆನರಾ ಬ್ಯಾಂಕ, ಶಾಖೆ ಮಹಾಲಿಂಗಪುರದಲ್ಲಿ ರೂ. 3 ಲಕ್ಷ ಬೆಳೆ ಸಾಲ ಹಾಗೂ 8 ಲಕ್ಷ ತೋಟದ ಮನೆಗಾಗಿ ಸಾಲ ಪಡೆಯಲಾಗಿದೆ. ಸದರಿ 12 ರಿಂದ 15 ಲಕ್ಷ ಹಣದಲ್ಲಿ ಅರ್ಧದಷ್ಟು ಸಾಲಕ್ಕೆ ಭರ್ತಿ ಮಾಡಲಿಕ್ಕೆ ಹಾಗೂ ಖರ್ಚು ವೆಚ್ಚಕ್ಕೆ ಅರ್ಧದಷ್ಟು ವೆಚ್ಚ ಆಗುವುದರಿಂದ ನನಗೆ ಆರೋಪಿಗೆ ಹಣ ಕೊಡುವ ಸಾಮರ್ಥ್ಯಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಂದ ಉತ್ಪನ್ನದಲ್ಲಿ ನಾವು ಖರ್ಚು ಮಾಡುವುದಿಲ್ಲ . ಹೈನುಗಾರಿಕೆಯಿಂದ ಹಣದಿಂದ ಖರ್ಚು ವೆಚ್ಚವನ್ನು ಮಾಡುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹೈನುಗಾರಿಕೆಯಿಂದ ಬಂದ ಆದಾಯದಿಂದ ಖರ್ಚುವೆಚ್ಚ ಭರಿಸಲಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಲ ಕಂಡಾಪಟಿ ಸಾಲ ಇದ್ದರು , ಆರೋಪಿಗೆ ಸದರಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈಗ ಇತ್ತೀಚಿಗೆ ತೋಟದ ಮನೆಯ ಮೇಲೆ ಸಾಲ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ತೋಟದ ಮನೆಗೆ ಸಾಲ ಪಡೆಯುವ ಪೂರ್ವದಲ್ಲಿ ಬೆಳೆ ಸಾಲವನ್ನುಪಡೆದಿರುತ್ತೇನೆ. ಯಾವಾಗ ಸಾಲ ಪಡೆದಿರುತ್ತೇನೆ ಎಂದು ಕುರಿತು ದಾಖಲಾತಿ ಹಾಜರು ಮಾಡುತ್ತೇನೆ. ಸದರಿ 2 ಲಕ್ಷ ರೂಪಾಯಿ ಹಾಗೂ 9 ಲಕ್ಷ ರೂಪಾಯಿ ವ್ಯವಹಾರದ ಕುರಿತು ಎರಡು ಚೆಕ್ಕುಗಳನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.